Literacy for a Billion

Movie: Bandhana
Year: 1984

Song: Ee Bandhana Januma Janumada
Lyricist: R N Jayagopal

ಈ ಬಂಧನ
ಜನುಮ ಜನುಮದ ಅನುಬಂಧನ
ಈ ಬಂಧನ
ಜನುಮ ಜನುಮದ ಅನುಬಂಧನ
ಈ ಪ್ರೇಮ
ಸಂಗೀತ ಸಂತೋಷ ಸಂಕೇತ
ಈ ಬಂಧನ
ಜನುಮ ಜನುಮದ ಅನುಬಂಧನ
ಈ ಪ್ರೇಮ
ಸಂಗೀತ ಸಂತೋಷ ಸಂಕೇತ

ಈ ಬಂಧನ
ನನ ನಿನ ಮಿಲನ ತಂದ
ಹೊಸ ಜೀವನ
ಈ ಬಂಧನ
ಎದೆಯ ತುಂಬಿ ಬಂದ
ಒಂದು ಸುಖ ಭಾವನ
ನಿನ ಮಡಿಲಲ್ಲಿ
ನಾನು ಮಗುವಾದೆ
ನಿನ ಉಸಿರಲ್ಲಿ
ನಾನು ಉಸಿರಾದೆ
ಪ್ರೇಮದ ಸೌರಭ
ಚೆಲ್ಲುವ ಚಂದನ

ಈ ಬಂಧನ
ಜನುಮ ಜನುಮದ ಅನುಬಂಧನ

ಈ ದಾರಿಯು
ಹೂವ ರಾಶಿ ಹಾಸಿ ನಮಗೆ
ಶುಭ ಕೋರಿದೆ
ಆ ದೂರದ
ಒಲವ ಮನೆಯು ಕೈಯ ಬೀಸಿ
ಬಾ ಎಂದಿದೆ
ಹೆಜ್ಜೆ ಜೊತೆಯಾಗಿ
ನಿನ ನೆರಳಾಗಿ
ಪ್ರೀತಿ ಬೆಳಕಾಗಿ
ದಾರಿ ಹಾಯಾಗಿ
ಸೇರುವ ಸುಂದರ
ಪ್ರೇಮದ ಮಂದಿರ
ಈ ಬಂಧನ
ಜನುಮ ಜನುಮದ ಅನುಬಂಧನ
ಈ ಪ್ರೇಮ
ಸಂಗೀತ ಸಂತೋಷ ಸಂಕೇತ
ಈ ಬಂಧನ
ಜನುಮ ಜನುಮದ ಅನುಬಂಧನ
ಈ ಪ್ರೇಮ
ಸಂಗೀತ ಸಂತೋಷ ಸಂಕೇತ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*